

ಆತ ವಿರುದ್ಧ ದಿಕ್ಕಿನಲ್ಲಿ ಹೊರಟಿದ್ದ. ನಗರದಲ್ಲಿ ಒಂದೇ ಹೆಸರಿನ ಎರಡು ಸ್ಥಳಗಳು ಇದ್ದುದೇ ಅದಕ್ಕೆ ಕಾರಣ. ಡ್ರೈವರ್‌ಗೆ ಹೇಳಿ, ತಮ್ಮ ಮನೆಯತ್ತ ಆಟೊವನ್ನು ತಿರುಗಿಸಲು ಸಾಕು ಸಾಕಾಯಿತು. ಅಂತೂ ಅಜ್ಜ ಎರಡು ತಾಸು ತಡವಾಗಿ ತಲುಪಿದರು. ಅವರು ಬರುತ್ತಲೇ ಖುಷಿಯಿಂದ ಗೇಟು ತೆಗೆದ ನಾಣಿ. ಆದರೆ, ಅವನಿಗೆ ಇನ್ನೊಂದು ಆಘಾತ ಕಾದಿತ್ತು. ಮುಂಜಾನೆ ಆತ ಎಸೆದಿದ್ದ ಬಾಳೆ ಹಣ್ಣಿನ ಸಿಪ್ಪೆಯ ಮೇಲೆ ಅಜ್ಜ ಕಾಲಿಟ್ಟು, ಜಾರಿದರು. ಅವರ ಕೈಲಿದ್ದ ಮೊಬೈಲ್ ಮೇಲಕ್ಕೆ ಚಿಮ್ಮಿ ನೆಲಕ್ಕುರುಳಿ ಒಡೆದೇ ಹೊಯಿತು. ಕಾಲಿನ ಮಂಡಿಗೆ ಗಾಯವಾಗಿ ರಕ್ತ ಸುರಿಯತೊಡಗಿತು. ಅದನ್ನು ಕಂಡ ಅಮ್ಮ ತಲೆ ಚಚ್ಚಿಕೊಂಡಳು.

ತನ್ನ ಅಜ್ಜ, ಅಜ್ಜಿ ದಾರಿ ತಪ್ಪಿದ್ದು, ಈಗ ಅಜ್ಜ ಬಿದ್ದದ್ದು, ಗಾಯವಾದದ್ದು ಹಾಗೂ ಮೊಬೈಲು ಒಡೆದದ್ದನ್ನು ಕಂಡ ನಾಣಿ ಕಣ್ಣೀರು ಹಾಕಿದ. ತಾನು ಇತರರಿಗೆ ಮನ ನೋಯಿಸಿದ್ದಕ್ಕೆ, ಈಗ ತನ್ನ ಹಿರಿಯರು ಕಷ್ಟಪಡುವಂತಾಯಿತು ಎನಿಸಿತು. ಓಡಿ ಹೋಗಿ ಅಜ್ಜನ ಕಾಲಿಗೆ ಬಿದ್ದ. ತಾನು ಇಲ್ಲಿಯವರೆಗೆ ಮಾಡಿದ ಒಂದೊಂದು ತಪ್ಪನ್ನೂ ಅಜ್ಜ, ಅಜ್ಜಿಯ ಬಳಿ ಹೇಳಿಕೊಂಡು ಅತ್ತ. ಇನ್ನು ತಾನೆಂದೂ ಈ ತಪ್ಪನ್ನು ಮಾಡುವುದಿಲ್ಲ ಎಂದು ವಾಗ್ದಾನ ಮಾಡಿದ.

# ಚೆಲುವ ಚೆನ್ನಿಗ ಚಂದಿರ

ಡಾ. ಕೆ.ಬಿ. ರಂಗಸ್ವಾಮಿ
ಕಲೆ: ಸಂತೋಷ್ ಸಸಿಹಿತ್ಲು

ಚೆಲುವ ಚೆನ್ನಿಗನಿವನು
ನಮ್ಮ ಪ್ರೀತಿಯ ಚಂದಿರ
ಬೇಕಿಲ್ಲ ಈ ಚೆಲುವನಿಗೆ
ಯಾವುದೇ ಆಡಂಬರ

ಮೊಗವರಳಿಸಿ ನಗುತಿರೆ
ಬಿರಿಯುವವು ಹೂಗಳು
ಸರಿಗಮಪ ಹಾಡಿದರೆ
ಝೇಂಕರಿಸುವವು ದುಂಬಿಗಳು

ಚಿಣ್ಣರಿಗೆ ಗೆಳೆಯನಿವನು
ಕರೆದೆಡೆಗೆ ಬರುವನು
ಹಳ್ಳಿಗರ ಸುಗ್ಗಿಯಲಿ
ತಾನೂ ಜೊತೆಗೂಡುವನು

ಕೊಳದಲ್ಲಿ ಮುಳುಗು ಹಾಕಿ
ಫಳಫಳನೆ ಹೊಳೆಯುವನು
ಮರಗಿಡಗಳ ಸಂದಿಯಿಂದ
ಕಿರಣ ತೂರಿ ಬೀಗುವನು

ಪಾಡ್ಯ ಕಳೆದು ಬಿದಿಗೆ ಬರಲು
ಇಣುಕುನೋಟ ಬೀರುವನು
ಶುಕ್ಲ ಪಕ್ಷ ಮುಗಿಯುತಿರಲು
ತೆರೆಯ ಮರೆಗೆ ಜಾರುವನು!



## ಕುಂಚ ಪ್ರಪಂಚ



**ಸುಕೃತಿ ಡಿ.ಎಸ್.**
5ನೇ ತರಗತಿ,
ಶ್ರೀಚೈತನ್ಯ ಟೆಕ್ನೊ ಸ್ಕೂಲ್,
ಬೆಂಗಳೂರು

